# ತಹಶೀಲ್ದಾರರ ನ್ಯಾಯಾಲಯ, ಬಳ್ಳಾರಿ ತಾ॥, ಬಳ್ಳಾರಿ-583101

## IN THE COURT OF THE TAHASILDAR , BALLARI (T), BALLARI-583101

Tel:08392-277415

Email Us:tahbel@gmail.com


ಸಂ/ಕಂ/ವಿವಾದ/46/2012-13

ದಿನಾಂಕ: -07-2016

## ನಡವಳಿಗಳು

| ವಾದಿಗಳು : | ಪ್ರತಿವಾದಿಗಳು : |
|---|---|
| ಶ್ರೀಮತಿ ಗಡಿಗೆ ಸಣ್ಣ ದ್ಯಾವಮ್ಮ ಗಂಡ ದಿ॥ ಗಡಿಗೆ ದೊಡ್ಡ ಪೊಂಪಣ್ಣ,<br>ಕೊಳಗಲ್ಲು ಗ್ರಾಮ, ಬಳ್ಳಾರಿ ತಾ॥. | ಶ್ರೀಮತಿ ಗಡಿಗೆ ಬಂದಮ್ಮ ಗಂಡ ಪೊಂಪಣ್ಣ,<br>ಶ್ರೀಮತಿ ನೀಲಮ್ಮ ಗಂಡ ಗುರುಬಸಪ್ಪ,<br>ಕೊಳಗಲ್ಲು ಗ್ರಾಮ, ಬಳ್ಳಾರಿ ತಾ॥. |

ವಿಷಯ: ಬಳ್ಳಾರಿ ತಾ॥ ಬಳ್ಳಾರಿ ಹೋಬಳಿ ಕೊಳಗಲ್ಲು ಗ್ರಾಮದ ಸ.ನಂ.: 582/ಸಿ ವಿಸ್ತೀರ್ಣ: 0.34 ಎಕರೆ ಜಮೀನಿನ ಹಕ್ಕು ಬದಲಾವಣೆ ಮಾಡುವ ಕುರಿತು.

**************

**ಪೀಠಿಕೆ** :

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾ॥ ಬಳ್ಳಾರಿ ಹೋಬಳಿ ಕೊಳಗಲ್ಲು ಗ್ರಾಮದ ಸ.ನಂ.: 582/ಸಿ ವಿಸ್ತೀರ್ಣ: 0.34 ಎಕರೆ ಜಮೀನಿನ ಹಾಲಿ ಭೂ ಮಾಲಿಕರಾದ ಶ್ರೀಮತಿ ಗಡಿಗೆ ಬಂದಮ್ಮ ಗಂಡ ಪೊಂಪಣ್ಣ, ಶ್ರೀಮತಿ ನೀಲಮ್ಮ ಗಂಡ ಗುರುಬಸಪ್ಪ ಇವರು ಶ್ರೀಮತಿ ಗಡಿಗೆ ಸಣ್ಣ ದ್ಯಾವಮ್ಮ ಗಂಡ ದಿ॥ ಗಡಿಗೆ ದೊಡ್ಡ ಪೊಂಪಣ್ಣ ಇವರಿಗೆ ಪಾಲು ವಿಭಾಗ ಮಾಡಿಕೊಟ್ಟಿರುತ್ತಾರೆ. ಅದರಂತೆ ಪಾಲು ವಿಭಾಗದಾರರು ಹಕ್ಕು ಬದಲಾವಣೆ ಮಾಡಲು ಮನವಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯಂತೆ ಕಂದಾಯ ನಿರೀಕ್ಷಕರು, ಬಳ್ಳಾರಿ. ಇವರು ಗ್ರಾಮದಲ್ಲಿ ನಮೂನೆ-21 ನ್ನು ಜಾರಿ ಮಾಡಲಾಗಿ ನಿಗಧಿತ ಅವಧಿಯಲ್ಲಿ 1) ಶ್ರೀಮತಿ ಗಡಿಗೆ ಬಂದಮ್ಮ ಗಂಡ ಪೊಂಪಣ್ಣ, 2) ಶ್ರೀಮತಿ ನೀಲಮ್ಮ ಗಂಡ ಗುರುಬಸಪ್ಪ ಇವರು ತಕರಾರು ಮನವಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಕಂದಾಯ ನಿರೀಕ್ಷಕರು, ಬಳ್ಳಾರಿ. ಇವರು ಸದರಿ ಪಾಲು ವಿಭಾಗ ಕಡತವನ್ನು ಇತ್ಯರ್ಥಪಡಿಸಲು ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ಇತ್ಯರ್ಥಪಡಿಸಲು ದಿನಾಂಕ: 21-03-2016, 30-05-2016, 06-06-2016, 04-07-2016 ಹಾಗೂ 11-07-2016 ರಂದು ವಿಚಾರಣೆ ಮಾಡಲಾಗಿ ಉಭಯ ಪಕ್ಷದವರ ಪರವಾಗಿ ನ್ಯಾಯವಾದಿಗಳು, ಈ ಕಾರ್ಯಾಲಯದ ನ್ಯಾಯಾಲಯಕ್ಕೆ ಹಾಜರಾಗಿ, ತಕರಾರುದಾರರಾದ 1) ಶ್ರೀಮತಿ ಗಡಿಗೆ ಬಂದಮ್ಮ ಗಂಡ ಪೊಂಪಣ್ಣ, 2) ಶ್ರೀಮತಿ ನೀಲಮ್ಮ ಗಂಡ ಗುರುಬಸಪ್ಪ ಇವರು ವಿಚಾರಣಾ ಸಮಯದಲ್ಲಿ ತಮ್ಮ ವಕೀಲರ ಮುಖಾಂತರ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಆದರೆ ಪಾಲು ವಿಭಾಗದ ಪತ್ರಕ್ಕೆ ಉಭಯರು ಒಪ್ಪಿ ಸಹಿಯನ್ನು ಮಾಡಲಾಗಿದ್ದು, ಪಾಲು ವಿಭಾಗದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಈ ಕೆಳಗಿನಂತೆ

## ಆದೇಶ

ಸಂ/ಕಂ/ವಿವಾದ/46/2012-13

ದಿನಾಂಕ: 11 -07-2016

ಪೀಠಿಕೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾ॥ ಬಳ್ಳಾರಿ ಹೋಬಳಿ ಕೊಳಗಲ್ಲು ಗ್ರಾಮದ ಸ.ನಂ.: 582/ಸಿ ವಿಸ್ತೀರ್ಣ: 0.34 ಎಕರೆ ಜಮೀನು ಪಾಲು ವಿಭಾಗ ಪತ್ರದ ಪ್ರಕಾರ ಶ್ರೀಮತಿ ಗಡಿಗೆ ಸಣ್ಣ ದ್ಯಾವಮ್ಮ ಗಂಡ ದಿ॥ ಗಡಿಗೆ ದೊಡ್ಡ ಪೊಂಪಣ್ಣ, ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 11-7-16 ರಂದು ಈ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

11/7/16

ತಹಶೀಲ್ದಾರರು,

ತಹಶೀಲ್ದಾರರು, ಬಳ್ಳಾರಿ

Tasildar, Bellary.

ಶಿರಸ್ತೇದಾರ್, ಭೂಮಿ ಗಣಕೀಕರಣ ಶಾಖೆ, ತಾಲ್ಲೂಕು ಕಛೇರಿ, ಬಳ್ಳಾರಿ. ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು:

1) ಶ್ರೀಮತಿ ಗಡಿಗೆ ಸಣ್ಣ ದ್ಯಾವಮ್ಮ ಗಂಡ ದಿ॥ ಗಡಿಗೆ ದೊಡ್ಡ ಪೊಂಪಣ್ಣ, ಕೊಳಗಲ್ಲು ಗ್ರಾಮ, ಬಳ್ಳಾರಿ ತಾ॥ ಇವರಿಗೆ ಮಾಹಿತಿಗಾಗಿ ರವಾನಿಸಿದೆ.
2) ಕಛೇರಿ ಕಡತಕ್ಕೆ.

Received copy